**ಸಿ.ಸಿ.ನಂ. 686/2014**

ಪಿ.ಡಬ್ಲ್ಯೂಃ 12

ಸಿ.ಡಬ್ಲ್ಯೂಃ 14

**ದಿನಾಂಕಃ 15-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

ಮುಂದುವರಿದ **ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

1 ಮತ್ತು 2 ನೇ ಆರೋಪಿತರು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರು ಆರೋಪಿತರ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಸದರಿ ಅಸಸ್ ಮೆಂಟ್ ರಿಜಿಸ್ಟರ್ ಮತ್ತು ಸಭಾ ನಡಾವಳಿ ಪುಸ್ತಕವನ್ನು ಮಹಜರ್ ಮೂಲಕ ಪಡೆದುಕೊಂಡಿರುತ್ತಾರೆ. ಸದರಿ ಅಸಸ್ ಮೆಂಟ್ ರಿಜಿಸ್ಟರ್ ಅರಸೀಕೆರೆ ಗ್ರಾಮಕ್ಕೆ ಸಂಬಂಧಪಟ್ಟಿರುತ್ತದೆ. ಸದರಿ ಅಸಸ್ ಮೆಂಟ್ ರಿಜಿಸ್ಟರ್ ನಲ್ಲಿ ಕ್ರಮ ಸಂಖ್ಯೆ 2(ಸಿ), ಅಸಸ್ ಮೆಂಟ್ ನಂ.2(ಸಿ) ಸಂದೇಶ್ ಶೆಟ್ಟಿ ಬಿನ್ ವಸಂತ್ ಶೆಟ್ಟಿ ಇವರ ಹೆಸರಿನಲ್ಲಿ ನಮೂದು ಆಗಿರುತ್ತದೆ. ಕ್ರಮ ಸಂಖ್ಯೆ 2(ಡಿ) ಅಸಸ್ ಮೆಂಟ್ 2(ಡಿ) ವೆಂಕಟೇಶ ಬಿನ್ ಬಿ.ಕೆ ಸುಂದರೇಶ್ ರವರ ಹೆಸರಿನಲ್ಲಿ ನಮೂದು ಆಗಿರುತ್ತದೆ. ಕ್ರಮ ಸಂಖೆ 2(ಇ) ಮತ್ತು ಅಸಸ್ ಮೆಂಟ್ ನಂ 2(ಇ) ಸೀತಾರಾಂ ಬಿನ್ ಮರಿಯಪ್ಪರವರ ಹೆಸರಿನಲ್ಲಿ ನಮೂದು ಆಗಿರುತ್ತದೆ. ಸದರಿ ಮಹಜರಿಗೆ ನಾನು ಸಹಿ ಹಾಕಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಅಮಾನತ್ತು ಮಹಜರ್ ಆಗಿದ್ದು ದಾಖಲಾತಿಯಾಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಇ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಅಸಸ್ ಮೆಂಟ್ ರಿಜಿಸ್ಟರ್ ನ ದೃಢೀಕೃತ ನಕಲಾಗಿದ್ದು ದಾಖಲಾತಿಯಾಗಿದ್ದು, ಸದರಿ ದಾಖಲೆಯನ್ನು ನಿಪಿ-11 ಎಂದು ಗುರುತಿಸಲಾಯಿತು.

ಸಾಕ್ಷಿಯು ತಮ್ಮ ಕಛೇರಿಯಿಂದ ಎರಡು ಒರಿಜಿನಲ್ ಸಭಾ ನಡಾವಳಿ ಪುಸ್ತಕಗಳನ್ನು ಹಾಜರುಪಡಿಸಿದ್ದು, ಅದನ್ನು ಗುರುತಿಸಿದ್ದು, ಸದರಿ ದಾಖಲಾತಿಯ ನೋಟರೀಕೃತ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದನ್ನು ಗುರುತಿಸುವಲ್ಲಿ ಆರೋಪಿತರ ಪರ ವಕೀಲರ

ಯಾವುದೇ ತಕರಾರು ಇಲ್ಲದ ಕಾರಣ ಸದರಿ ಒಂದು ಪುಸ್ತಕದ ಪುಟ ಸಂಖ್ಯೆ 1 ರಿಂದ 98 ಇರುವ ಸಭಾ ನಡಾವಳಿ ಪುಸ್ತಕದ ನೋಟರೀಕೃತ ಕಾಫಿಯನ್ನು ನಿಪಿ-12 ಎಂದು ಗುರುತಿಸಲಾಯಿತು ಮತ್ತು ಪುಟ ಸಂಖ್ಯೆ 1 ರಿಂದ 36 ಇರುವ ನೋಟರೀಕೃತ ಸಭಾ ನಡಾವಳಿ ಪುಸ್ತಕದ ನೋಟರೀಕೃತ ಕಾಫಿಯನ್ನು ನಿಪಿ-13 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಃ 1 ನೇ ಆರೋಪಿ ಪರ ವಕೀಲರಿಂದ.</u>**

ಸಭಾ ನಡವಳಿಕೆಗೆ ಒಂದು ವಿಷಯ ಬರಬೇಕಾದರೆ ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ಸದರಿ ಸಭಾ ನಡವಳಿಕೆಗೆ ಸಂದೇಶ್ ಶೆಟ್ಟಿ ಬಿನ್ ವಸಂತ್ ಶೆಟ್ಟಿರವರು ಅರ್ಜಿ ಕೊಟ್ಟಿರುವ ಬಗ್ಗೆ ನಿಮ್ಮ ಹತ್ತಿರ ದಾಖಲೆ ಯಾವುದಾದರೂ ಇದೆಯೇ ಎಂದರೆ ಸಾಕ್ಷಿಯು ಅದು ನನ್ನ ಪಿರಿಯಡ್ ನಲ್ಲಿ ಆಗಿರುವುದಿಲ್ಲ, ನನ್ನ ಹತ್ತಿರ ಯಾವುದೇ ಆ ತರಹದ ಅರ್ಜಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಸ್ ಮೆಂಟ್ ರಿಜಿಸ್ಟರ್ ಪುಸ್ತಕದಲ್ಲಿ 2(ಸಿ) ಎಂದು ಕ್ರಮ ಸಂಖ್ಯೆಯಲ್ಲಿ ನಮೂದು ಮಾಡಿದ್ದು, ಸದರಿ 2(ಸಿ) ಎಂದು ನಮೂದು ಮಾಡಿರುವ ದಿನಾಂಕ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ. ಸದರಿ ಅಸಸ್ ಮೆಂಟ್ ರಿಜಿಸ್ಟರ್ ನಲ್ಲಿ ಬೇರೆ ಎಂ ಆರ್ ಸಂಖ್ಯೆಗಳ ಮುಂದೆ ದಿನಾಂಕವನ್ನು ನಮೂದು ಮಾಡಿದ್ದು, ಸದರಿ 2(ಸಿ) ಸಂಖ್ಯೆಯ ಮುಂದೆ ಯಾವುದೇ ದಿನಾಂಕ ಮತ್ತು ಎಂ ಆರ್ ನಮೂದು ಮಾಡಿಲ್ಲ ಎಂದರೆ ಸರಿ. ಅರಸಿಕೆರೆಯ ಗ್ರಾಮದಲ್ಲಿ ಅಸಸ್ ಮೆಂಟ್ ರಿಜಿಸ್ಟರ್ ನ ಪ್ರಕಾರ ಅದರಲ್ಲಿರುವ ಅಷ್ಟು ಜನಗಳ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ. ಸದರಿ ಅಸಸ್ ಮೆಂಟ್ ರಿಜಿಸ್ಟರ್ ನಲ್ಲಿ 2(ಸಿ) ಎಂದು ನಮೂದಾಗಿರುವುದಕ್ಕೆ ಯಾರು ಕಾರಣ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ, ಮತ್ತು ಅದರ ಬಗ್ಗೆ ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ಸದರಿ ಅಸಸ್ ಮೆಂಟ್ ರಿಜಿಸ್ಟರ್ ನಲ್ಲಿ ಈ ತರಹದ ಯಾವುದೇ ಅರ್ಜಿ ಇಲ್ಲದೇ ನಮೂದು ಮಾಡಿರುವ ಎಂಟ್ರಿಯನ್ನು ತೆಗೆದುಹಾಕಬಹುದು ಎಂದರೆ ಸಾಕ್ಷಿಯು ಇ ಒ ರವರ ಗಮನಕ್ಕೆ ತಂದು ತೆಗೆದುಹಾಕಬಹುದು ಎಂದು ನುಡಿದಿರುತ್ತಾರೆ. ಸಾಕ್ಷಿದಾರರಿಗೆ ಅಸಸ್ ಮಂಟ್ ರಿಜಿಸ್ಟರ್ ದಾಖಾತಿಯನ್ನು ತೋರಿಸಿ, ಅದರಲ್ಲಿ ನಮೂದು ಆಗಿರುವ ಇಸಿಯ ಮುಂದೆ ಬರೆದಿರುವ ಬರವಣಿಗೆ ಮತ್ತು ಅದರ ಹಿಂದೆ ಮುಂದೆ ಇರುವ ಬರವಣಿಗೆಗೂ ತಾಳೆ ಇಲ್ಲ ಎಂದರೆ ಸಾಕ್ಷಿ ಇಲ್ಲ ಎಂದು

ನುಡಿದಿರುತ್ತಾರೆ. ಈ ಪ್ರಕರಣದಲ್ಲಿ ನೀವು ಸಲ್ಲಿಸಿರುವ ದಾಖಲಾತಿಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು ಃ 2 ನೇ ಆರೋಪಿ ಪರ ವಕೀಲರಿಂದ.**

ಅಸಸ್ ಮೆಂಟ್ ರಿಜಿಸ್ಟರ್ ನಲ್ಲಿ ದಿನಾಂಕವು ನಮೂದು ಆಗದಿರುವ ಕಾರಣ ಇದು ಯಾವ ಪಿರಿಯಡ್ ನಲ್ಲಿ ಅಸಸ್ ಮೆಂಟ್ ಎಂಟ್ರಿ ಆಗಿದೆ ಎಂದರೆ, ಸಾಕ್ಷಿಯು ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**

**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**
**ಸಿ.ಸಿ.ನಂ.**

ಪಿ.ಡಬ್ಲ್ಯೂ: 1
ಸಿ.ಡಬ್ಲ್ಯೂ: 1

ಸಾಕ್ಷಿದಾರರ ಹೆಸರು :
ತಂದೆಯ ಹೆಸರು :
ವಯಸ್ಸು : **ವರ್ಷ**
ಉದ್ಯೋಗ : ವ್ಯವಸಾಯ
ವಾಸಸ್ಥಳ :

**ದಿನಾಂಕ: 15-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**
**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

5 ನೇ ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಚಾಸಾ-1 ನನಗೆ ಗೊತ್ತು. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಗಳು ನನಗೆ ಗೊತ್ತು. ನಾನು ಈ ಪ್ರಕರಣದ ಘಟನೆಯನ್ನು ಕಣ್ಣಾರೆ ಕಂಡಿರುವುದಿಲ್ಲ, ನನಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಸಂಬಂಧ ಬೇರೇನೂ ಗೊತ್ತಿರುವುದಿಲ್ಲ.

ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ನಾನು ನಂದಿಹೊಸಳ್ಳಿ ಗ್ರಾಮದಲ್ಲಿ ಸಂಜೆ 4-00 ಗಂಟೆ ಸಮಯದಲ್ಲಿ ರಸ್ತೆಯಲ್ಲಿ ಬರುತ್ತಿರುವಾಗ ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ **21-03-2020** ರಂದು ರಾತ್ರಿ **7-00** ಗಂಟೆ ಸಮಯದಲ್ಲಿ ಕರಕುಚ್ಚಿ ತಾಂಡ್ಯದ **2** ನೇ ಆರೋಪಿಯ ಅಂಗಡಿಯ ಮುಂದೆ ಪೊಲೀಸರು ಮಹಜರ್ ಕ್ರಮವನ್ನು ಜರುಗಿಸಿದ್ದು, ಅದಕ್ಕೆ ನನ್ನ ಸಹಿ ಹಾಕಿರುತ್ತೇನೆಂದರೆ ಸರಿ. **1** ನೇ ಆರೋಪಿಯು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದು, ಸದರಿ ಮದ್ಯವನ್ನು ಅವರಿಂದ ಅಮಾನತ್ತುಪಡಿಸಿಕೊಂಡ ಬಗ್ಗೆ ನಾನು ನಿಪಿ-**2** ಕ್ಕೆ ಸಹಿ ಹಾಕಿರುತ್ತೇನೆಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಆರೋಪಿಯ ಕಡೆಯಿಂದ **330** ಎಂ ಎಲ್ ನ ಯು ಬಿ ಎಕ್ಸಪೋರ್ಟ್ ಪ್ರಿಮಿಯಮ್ ನ **10** ಬೀಯರ್ ಬಾಟಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಅದೇ ರೀತಿ **90** ಎಂ ಎಲ್ ನ ಕ್ಯಾಪ್ಟನ್ ಮಾರ್ಟಿನ್ ಸ್ಪೆಷಲ್ ವಿಸ್ಕಿಯ **37** ಪೌಚುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಆರೋಪಿಯಿಂದ ಮದ್ಯದ ಪೌಚುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ.

ಆರೋಪಿತರು ನನಗೆ ಪರಿಚಯವಿರುವ ಕಾರಣ, ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ-**2** ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ಈ ಪ್ರಕರಣದ ಘಟನೆಯನ್ನು ಕಣ್ಣಾರೆ ಕಂಡಿದ್ದೇನೆಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದಂತೆ ನಾನು ಮೇಲ್ಕಂಡ ವಿಳಾಸದಲ್ಲಿ – - - -ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗೆಳೆದ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ನಾನು ಈ ಪ್ರಕರಣದ ಘಟನೆಯನ್ನು ಕಣ್ಣಾರೆ ಕಂಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.**

ಪಾಟೀ ಸವಾಲು ಇಲ್ಲ

**ಮರುವಿಚಾರಣೆ:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**